ಅಲ್ಲಿನ ಸ್ಟಾರ್ ನಟರೆಲ್ಲ ಕಣ್ಣುಜ್ಜಿಕೊಂಡು ಚಂದನವನದ ಕಡೆ ನಿರೀಕ್ಷೆ ಆತಂಕಗಳಿಂದ ನೋಡುತ್ತಿದ್ದಾರೆ. ಪ್ರೇಕ್ಷಕರೂ ಅಷ್ಟೇ ಉತ್ಸಾಹದಿಂದ ಕಾಯುತ್ತಿದ್ದಾರೆ. ಹಾಗಾಗಿ ಕೆ.ಜಿ.ಎಫ್. ಹುಟ್ಟಿಸಿದ ನಿರೀಕ್ಷೆಯ ಭಾರವನ್ನು ಹೆಗಲ ಮೇಲೆ ಹೊತ್ತೇ ವಿಕ್ರಾಂತ್ ರೋಣ ಉತ್ತರದ ಪ್ರೇಕ್ಷಕನಿಗೆ ಮುಖಾಮುಖಿಯಾಗಬೇಕಿದೆ.

ಇತ್ತ ಸುದೀಪ್ ಅವರಿಗೂ ಈ ಸಿನಿಮಾ ಗೆಲ್ಲುವುದು ಹಲವು ಕಾರಣಕ್ಕೆ ಅಗತ್ಯವಾಗಿದೆ. ಅವರು ಅಭಿನಯಿಸಿದ ಕನ್ನಡ ಸಿನಿಮಾವೊಂದು ಬಾಕ್ಸ್ ಆಫೀಸಿನಲ್ಲಿ ದೊಡ್ಡ ಗೆಲುವು ದಾಖಲಿಸಿ ಹಲವು ವರ್ಷಗಳೇ ಕಳೆದುಹೋಗಿವೆ. ನಿರೀಕ್ಷೆಯ ಬಲೂನಿಗೆ ಗಾಳಿಯುಬ್ಬಿಸಿ ನಂತರ ಡಪ್ ಎಂದು ಒಡೆದು ಹೋಗಿದ್ದೇ ಹೆಚ್ಚು. ಅಭಿಮಾನಿ ದೇವರುಗಳನ್ನಷ್ಟೇ ನೆಚ್ಚಿಕೊಂಡರೆ ಮೂರು ದಿನದಾಚೆ ಚಿತ್ರಮಂದಿರಗಳು ಭಣಗುಡಲು ಶುರುವಾಗುತ್ತವೆ ಎಂಬ ವಾಸ್ತವ ಅವರಿಗೆ ತಿಳಿಯದ್ದೇನಲ್ಲ. ಹಾಗಾಗಿ ಸುದೀಪ್‌ಗೀಗ ಕಮರ್ಷಿಯಲ್ ಗೆಲುವು ಅನಿವಾರ್ಯವೂ ಹೌದು.

ಇತ್ತೀಚೆಗೆ ಬಿಡುಗಡೆಯಾದ 'ರಕ್ಕಮ್ಮ...' ಹಾಡು ಸೋಷಿಯಲ್ ಮೀಡಿಯಾದಲ್ಲಿ ಸಾಕಷ್ಟು ಸದ್ದು ಮಾಡುತ್ತಿದೆ. 'ನೂರು ಕೋಟಿಗೆ ಒಟಿಟಿಯವರು ಸಿನಿಮಾ ಖರೀದಿಸಲು ಮುಂದೆ ಬಂದಿದ್ದು. ನಾವು ಚಿತ್ರಮಂದಿರದಲ್ಲಿ ಜನರಿಗೆ ತೋರಿಸಬೇಕು ಎಂಬ ಕಾರಣಕ್ಕೆ ಅವರಿಗೆ ಕೊಟ್ಟಿಲ್ಲ' ಎಂದು ನಿರ್ಮಾಪಕರು ಹಿಂದೊಮ್ಮೆ ಹೇಳಿದ್ದರು. ಅವರಿಗೆ ಚಿತ್ರಮಂದಿರಗಳ ಮೂಲಕವೇ ಹಲವು ನೂರು ಕೋಟಿಗಳನ್ನು ಬಾಚುವ ವಿಶ್ವಾಸ ಇರುವಂತಿದೆ. ಕನ್ನಡದ ಸಿನಿಮಾವೊಂದಕ್ಕೆ ಅದೇನೂ ಅಸಾಧ್ಯವಾದದ್ದಲ್ಲ ಎಂದು ಈಗಾಗಲೇ ಕೆ.ಜಿ.ಎಫ್. ಸಾಬೀತುಮಾಡಿದೆ.

ಈ ನಡುವೆ ಜುಲೈ 10ರಂದು ರಕ್ಷಿತ್ ಶೆಟ್ಟಿ ಅಭಿನಯದ 'ಚಾರ್ಲಿ 777' ಐದು ಭಾಷೆಗಳಲ್ಲಿ ಬಿಡುಗಡೆಯಾಗುತ್ತಿದೆ. ಆ ಸಿನಿಮಾದ ಮೇಲೂ ಸಕಾರಣವಾಗಿ ಸಾಕಷ್ಟು ನಿರೀಕ್ಷೆಗಳಿವೆ. ಚಾರ್ಲಿ ಮತ್ತು 'ವಿಕ್ರಾಂತ್ ರೋಣ' ಎರಡೂ ಸಿನಿಮಾಗಳು ಕನ್ನಡದಾಚೆಗೆ ದೊಡ್ಡ ಗೆಲುವು ದಾಖಲಿಸಿದರೆ ಚಂದನವನದ ಕಿರೀಟ ಇನ್ನಷ್ಟು ಪ್ರಖರವಾಗಿ ಹೊಳೆಯುವುದರಲ್ಲಿ ಅನುಮಾನವಿಲ್ಲ. ಆದರೆ ಆ ಗೆಲುವು ಸುಲಭದ ದಾರಿಯಲ್ಲಿಯೇನೂ ಇಲ್ಲ. ಆ ದಾರಿಯಲ್ಲಿ ಈ ಎರಡು ಸಿನಿಮಾಗಳು ಎಷ್ಟು ದೂರ ಸಾಗುತ್ತವೆ ನೋಡಬೇಕು. ಈ ಮಳೆಗಾಲ ಚಂದನವನದಲ್ಲಿ ಹೊಸದೇನಾದರೂ ಚಿಗುರಿಸುತ್ತದೆಯೋ ಅಥವಾ ಬರಗಾಲವನ್ನೇ ಮರುಕಳಿಸುತ್ತದೆಯೋ ಎಂಬುದರ ಉತ್ತರವಂತೂ ಸದ್ಯದಲ್ಲಿಯೇ ಸಿಗಲಿದೆ. ■

## ಪ್ರಭುದೇವ್-ಶಿವಣ್ಣ ಜೋಡಿಯ ಮೋಡಿ



ಯೋಗರಾಜ್ ಭಟ್ಟರು ಭಯಂಕರ ಬ್ಯುಸಿಯಾಗಿದ್ದಾರೆ. 'ಗಾಳಿಪಟ 2' ಸಿನಿಮಾ ಇನ್ನೇನು ತೆರೆಗೆ ಬರಲು ಸಜ್ಜಾಗಿದೆ. ಅಷ್ಟರಲ್ಲಿಯೇ 'ಗರಡಿ' ಚಿತ್ರೀಕರಣ ಮುಗಿಸಿದ್ದಾರೆ. ಅದರ ಬೆನ್ನಲ್ಲೇ ಶಿವರಾಜ್‌ಕುಮಾರ್ ಮತ್ತು ಪ್ರಭುದೇವ್ ಕಾಂಬಿನೇಷನ್‌ನಲ್ಲಿ ಇನ್ನೊಂದು ಪ್ಯಾನ್ ಇಂಡಿಯಾ ಸಿನಿಮಾವನ್ನು ಘೋಷಿಸಿದ್ದರು. 'ಘೋಷಣೆಯೇನು, ಸಿನಿಮಾ ಯಾವಾಗ ಬೇಕಾದರೂ ಮಾಡಬಹುದು. ಸಿನಿಮಾ ಶುರುವಾಗಬೇಕಲ್ಲ' ಎಂದು ಮೂಗಿನಡಿಯಲ್ಲಿಯೇ ನಕ್ಕವರೂ ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವ ಹಾಗೆ ಜೂನ್ 9ಕ್ಕೆ ಚಿತ್ರದ ಮುಹೂರ್ತವೂ ನಡೆದು, ಚಿತ್ರೀಕರಣ ಶುರುವಾಗುತ್ತಿದೆ. 'ಜಯಮ್ಮನ ಮಗ' ಚಿತ್ರದ ನಿರ್ದೇಶಕ ವಿಕಾಸ್ ಮತ್ತು ಯೋಗರಾಜ್ ಭಟ್ಟರು ಸೇರಿಕೊಂಡು ಈ ಸಿನಿಮಾದ ಕಥೆ ಬರೆದಿದ್ದಾರೆ. ಸ್ನೇಹಬಂಧದ ಕಥೆ ಇರುವ ಈ ಚಿತ್ರದಲ್ಲಿ ಡಾನ್ಸ್ ಮತ್ತು ಆ್ಯಕ್ಷನ್ ದೃಶ್ಯಗಳೂ ಸಾಕಷ್ಟಿರಲಿವೆಯಂತೆ. 'ಶಿವಣ್ಣ ಮತ್ತು ಪ್ರಭುದೇವ ಇಬ್ಬರ ಅಭಿಮಾನಿಗಳೂ ಇಷ್ಟಪಡುವಂಥ ಸಿನಿಮಾ ಇದು' ಎನ್ನುವುದು ಭಟ್ಟರ ವಿವರಣೆ. ಈ ಚಿತ್ರಕ್ಕೆ ರಾಕ್‌ಲೈನ್ ವೆಂಕಟೇಶ್ ಹಣ ಹೂಡುತ್ತಿದ್ದಾರೆ.

## ಕಾಳಿ ಅವತಾರದಲ್ಲಿ ಅಭಿಷೇಕ್!




ಸೂರಿ ನಿರ್ದೇಶನದ 'ಬ್ಯಾಡ್ ಮ್ಯಾನ್' ಸಿನಿಮಾದಲ್ಲಿ ಅಭಿಷೇಕ್ ಅಂಬರೀಶ್ ನಾಯಕನಾಗಿ ನಟಿಸುತ್ತಿರುವುದು ಎಲ್ಲರಿಗೂ ಗೊತ್ತಿದೆ. ಈಗ ಅಭಿಷೇಕ್ ಅಭಿನಯದ ಮತ್ತೊಂದು ಸಿನಿಮಾ ಘೋಷಣೆಯಾಗಿದೆ. 'ಕಾಳಿ' ಎಂಬ ಹೆಸರಿನ ಈ ಸಿನಿಮಾದಲ್ಲಿಯೂ ಅಭಿಷೇಕ್, ಬ್ಯಾಡ್ ಬಾಯ್ ಆಗಿಯೇ ಕಾಣಿಸಿಕೊಳ್ಳುವ ಸೂಚನೆ ಇದೆ. ಇತ್ತೀಚೆಗೆ ಬಿಡುಗಡೆಯಾಗಿರುವ ಚಿತ್ರದ ಫಸ್ಟ್‌ಲುಕ್ ಕೂಡ ಅದನ್ನೇ ಹೇಳುತ್ತಿರುವಂತಿದೆ. 'ಗಜಕೇಸರಿ', 'ಹೆಬ್ಬುಲಿ', 'ಪೈಲ್ವಾನ್' ಸಿನಿಮಾಗಳನ್ನು ನಿರ್ದೇಶಿಸಿದ್ದ ಕೃಷ್ಣ ಅವರು ಈ ಸಿನಿಮಾಗೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಕಾವೇರಿ ಗಲಾಟೆ ಸಂದರ್ಭದಲ್ಲಿ ನಡೆದ ನೈಜ ಘಟನೆಯನ್ನು ಇಟ್ಟುಕೊಂಡು ಅವರು ಈ ಸಿನಿಮಾದ ಕಥೆಯನ್ನು ಕಟ್ಟಿದ್ದಾರಂತೆ. ನೆತ್ತರ ನದಿಯಲ್ಲಿ ಅರಳಿದ ಒಂದು ಪ್ರೇಮಕಥೆಯೂ ಈ ಸಿನಿಮಾದಲ್ಲಿ ಇದೆಯಂತೆ. ಲವ್ ಸ್ಟೋರಿ ಮೂಲಕ ಹೀರೊ ಆಗಿ ಪರಿಚಿತರಾಗಿದ್ದ ಅಭಿಷೇಕ್ ಈಗ ಆ್ಯಕ್ಷನ್ ದಾರಿಯಲ್ಲಿಯೇ ಮುಂದೆ ಸಾಗುತ್ತಿದ್ದಾರೆ. ತಂದೆಗೆ ಸಿಕ್ಕ ರೆಬಲ್ ಗುರುತು ಮಗನಿಗೂ ಸಿಗಬಹುದೇ ಎಂಬುದನ್ನು ಕಾದು ನೋಡಬೇಕು.

## ಜಮಾಲಿ ಗುಡ್ಡದಲ್ಲಿ ಡಾಲಿ



ಡಾಲಿ ಧನಂಜಯ್ ಅವರ ಸಾಲು ಸಾಲು ಸಿನಿಮಾಗಳು ತೆರೆ ಕಾಣಿಸುತ್ತಲೇ ಇವೆ. ಅವರು ಅದಿತಿ ಪ್ರಭುದೇವ ಅವರ ಜೊತೆಗೆ ತೆರೆ ಹಂಚಿಕೊಂಡಿರುವ 'ಒನ್ಸ್ ಅಪಾನ್ ಎ ಟೈಮ್ ಜಮಾಲಿಗುಡ್ಡ' ಸಿನಿಮಾದ ಬಿಡುಗಡೆ ದಿನಾಂಕವೂ ಇತ್ತೀಚೆಗೆ ಘೋಷಣೆಯಾಗಿದೆ. ಸೆ. 9ರಂದು ಜಮಾಲಿಗುಡ್ಡವನ್ನು ತೆರೆಯ ಮೇಲೆ ಕಾಣಿಸಲು ತಂಡ ನಿರ್ಧರಿಸಿದೆ.

ಬೆಂಗಳೂರು, ಚಿಕ್ಕಮಗಳೂರು, ಕುದುರೆಮುಖ, ಗೋಕರ್ಣ, ಶಿವಮೊಗ್ಗಗಳಲ್ಲಿ ಈ ಚಿತ್ರದ ಚಿತ್ರೀಕರಣ ನಡೆಸಲಾಗಿದೆ. ಪೋಸ್ಟ್ ಪ್ರೊಡಕ್ಷನ್ ಹಂತದ ಕೆಲಸ ನಡೆಯುತ್ತಿದೆ. 90ರ ದಶಕದಲ್ಲಿ ನಡೆಯುವ ಈ ಕಥೆಯಲ್ಲಿ ಧನಂಜಯ್ ಬಾರ್ ಸಪ್ಲಾಯರ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರಂತೆ. ಪ್ರಕಾಶ್ ಬೆಳವಾಡಿ, ಭಾವನಾ ರಾಮಣ್ಣ ಸೇರಿದಂತೆ ಹಲವು ಪ್ರತಿಭಾವಂತ ನಟರ ದಂಡು ತಾರಾಗಣದಲ್ಲಿದೆ. ಕುಶಾಲ್ ಗೌಡ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ.